(ಊ) ಆಯುಷ್ ವೈದ್ಯರು (ದರ್ಜೆ–2) ಇವರುಗಳಿಗೆ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಾವಳಿ, 1983 ಅನ್ವಯವಾಗುವುದರಿಂದ, ಸರ್ಕಾರಿ ಆದೇಶ ಸಂಖ್ಯೆ: ಆಕುಕ 222 ಎಂಎಸ್‌ಎಸ್ 1990, ದಿನಾಂಕ: 19ನೇ ಜುಲೈ 1991 ಅದೇಶ ಅನ್ವಯಿಸಲು ಸಾಧ್ಯವಾಗುವುದಿಲ್ಲ.

ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಮಾಹಿತಿ

480 (185) **ಡಾ॥ ಬಗಲಿ ಸಾರ್ವಭೌಮ ಸಾತಗೌಡ** (ಇಂಡಿ) ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

(ಅ) ಇಂಡಿ ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾದ ಹಾಸಿಗೆಗಳ ಸಂಖ್ಯೆ ಎಷ್ಟು;

(ಅ) ಈ ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾದ ವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು ಮತ್ತು ಅಲ್ಲಿ ಎಷ್ಟು ಜನ ವೈದ್ಯರು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ.

(ಇ) ಇಂಡಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆ ಎಷ್ಟು (ವಿವರ ನೀಡುವುದು) (Speciality wise) ತಜ್ಞ ವೈದ್ಯರ ಆಧಾರದ ಮೇಲೆ;

(ಈ) ರಾಜ್ಯದಲ್ಲಿ 2008 ಜೂನ್‌ರಲ್ಲಿ ಎಷ್ಟು ಜನ ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದರು; ಅಕ್ಟೋಬರ್ 2011 ರಲ್ಲಿ ಎಷ್ಟು ಜನ ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದರು;

(ಉ) ರಾಜ್ಯದಲ್ಲಿ 2008 ಜೂನ್ ಮತ್ತು 2011 ಅಕ್ಟೋಬರ್ ಈ ಅವಧಿಯಲ್ಲಿ ಎಷ್ಟು ಜನ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲಾಗಿದೆ.

(ಊ) 2008 ಜೂನ್ ರಿಂದ 2011 ಅಕ್ಟೋಬರ್ ಅವಧಿಯಲ್ಲಿ ಎಷ್ಟು ಜನ ತಜ್ಞ ವೈದ್ಯರನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಬಿಡುಗಡೆ ಮಾಡಲಾಯಿತು; ಇದು ಸರಕಾರದ ತಪ್ಪು ನಿರ್ಧಾರವಲ್ಲವೆ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):

(ಅ) ಇಂಡಿ ಸಾರ್ವಜನಿಕ ಆಸ್ಪತ್ರೆಯು 100 ಹಾಸಿಗೆಗಳ ಸಾಮರ್ಥ್ಯ ಹೊಂದಿದೆ.

(ಆ) ಈ ಸಾರ್ವಜನಿಕ ಆಸ್ಪತ್ರೆಗೆ ಒಟ್ಟು 11 ವೈದ್ಯರ ಹುದ್ದೆಗಳು (ಅಂದರೆ 09 ತಜ್ಞ ವೈದ್ಯರು. 1 ಮುಖ್ಯ ವೈದ್ಯಾಧಿಕಾರಿ ಹಾಗೂ 1 ಹಿರಿಯ ವೈದ್ಯಾಧಿಕಾರಿ) ಮಂಜೂರಾಗಿದ್ದು, 2 ತಜ್ಞ ವೈದ್ಯರು ಅಂದರೆ ಮಕ್ಕಳ ತಜ್ಞರು ಹಾಗೂ ಅರವಳಿಕೆ ತಜ್ಞರು) ಕಾರ್ಯ ನಿರ್ವಹಿಸುತ್ತಿದ್ದಾರೆ.

(ಇ) ಇಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೆಳಕಂಡ 9 ತಜ್ಞರ ಹುದ್ದೆಗಳು ಖಾಲಿ ಇವೆ:–

1. ಜನರಲ್ ಮೆಡಿಸಿನ್

2. ಜನರಲ್ ಸರ್ಜರಿ

3. ಸ್ತ್ರೀರೋಗ ತಜ್ಞರು

4. ಎಲುಬು ಕೀಲು ತಜ್ಞರು

5. ನೇತ್ರ ತಜ್ಞರು

6. ಮುಖ್ಯ ವೈದ್ಯಾಧಿಕಾರಿ

7. ಕಿವಿ. ಮೂಗು, ಗಂಟಲು ತಜ್ಞರು

8. ಹಿರಿಯ ವೈದ್ಯಾಧಿಕಾರಿ

9. ಚರ್ಮರೋಗ ತಜ್ಞರು

(ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಜೂನ್ – 2008ರಲ್ಲಿ 834 ತಜ್ಞರು ಕಾರ್ಯ ನಿರ್ವಹಿಸುತ್ತಿದ್ದರು. ಅಕ್ಟೋಬರ್–2011ರಲ್ಲಿ 1557 ತಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ.

(ಉ) ಸದರಿ ಅವಧಿಯಲ್ಲಿ 723ತಜ್ಞ ವೈದ್ಯರು ನೇಮಕಗೊಂಡಿದ್ದು ಇವರಲ್ಲಿ ಬಹುತೇಕ ವೈದ್ಯರು ಮುಂಗಡ್ತಿ ಮೂಲಕ ನೇಮಕಗೊಂಡಿರುವವರಾಗಿರುತ್ತಾರೆ.

(ಊ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗೆ ಸೇರಿದ ವೈದ್ಯರನ್ನು ಸದರಿ ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ನಿಯೋಜಿಸಿರುವುದಿಲ್ಲ.